ಶ್ರೀ ತಿಪ್ಪೇಸ್ವಾಮಿ :— ಆಧ್ಯತೆ ಮೇರೆಗೆ ನಾನು ಆ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ವಿಚಾರ ಹೇಳಿದರು. ಬೃಹತ್ ನೀರಾವರಿ ಇಲಾಖೆಗೆ ಏಕೆ ಆ ಕಾಮಗಾರಿಗಳನ್ನು ವಹಿಸಿಕೊಟ್ಟಿದ್ದೀರಿ ಎಂದು. ಸಣ್ಣ ನೀರಾವರಿ ಇಲಾಖೆ ಅಂದರೆ 5 ಸಾವಿರ ಎಕರೆಗಳಿಗಿಂತ ಕೆಳಗಡೆ ಇರುವಂತಹ ಪ್ರಾಜೆಕ್ಟ್‌ಗಳಿಗೆ ಸಣ್ಣ ನೀರಾವರಿ ಎಂದು ಕರೆಯುತ್ತೇವೆ. 5 ಸಾವಿರದಿಂದ 10 ಸಾವಿರದ ಒಳಗೆ ಬರತಕ್ಕಂಥ ಅಚ್ಚುಕಟ್ಟು ಪ್ರದೇಶಗಳಿಗೆ ಮಧ್ಯಮ ನೀರಾವರಿ ಅಚ್ಚುಕಟ್ಟು ಪ್ರದೇಶ ಎಂದು ಕರೆಯುತ್ತೇವೆ. 10 ಸಾವಿರಕ್ಕೂ ಮೇಲ್ಪಟ್ಟು ಬರತಕ್ಕಂಥ ಅಚ್ಚುಕಟ್ಟು ಪ್ರದೇಶಗಳಿಗೆ ಬೃಹತ್ ನೀರಾವರಿ ಎಂದು ಕರೆಯುತ್ತೇವೆ. ಆ ಕೆಟಗರಿಯಲ್ಲಿ ಯಾವ ಯಾವ ಏತ ನೀರಾವರಿ ಎಷ್ಟೆಷ್ಟು ಅಚ್ಚುಕಟ್ಟು ಇದೆ ಎನ್ನತಕ್ಕಂಥ ಆಧಾರ ಇಟ್ಟುಕೊಂಡು ಸಣ್ಣ ನೀರಾವರಿಗೆ, ಮಧ್ಯಮ ನೀರಾವರಿಗೆ, ಬೃಹತ್ ನೀರಾವರಿಗೆ ಬದಲಾಯಿಸಿದ್ದೇವೆಯೇ ವಿನಹ: ದೊಡ್ಡವರು ಎಂದು ಏನೂ ಬದಲಾಯಿಸುಕೊಂಡಿಲ್ಲ. ಅದೆಲ್ಲಾ ನಿಮ್ಮ ಹತ್ತಿ. ನಮ್ಮಲ್ಲಿ ಇಲ್ಲ.

ಹೇಮಾವತಿ ತುಮಕೂರು ನಾಲಾ ವಲಯದ ಕಾಮಗಾರಿಗಳ ಪ್ರಗತಿ.

09(146) ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹೇಮಾವತಿ ತುಮಕೂರು ನಾಲಾ ವಲಯದ ಕಾಮಗಾರಿಗಳಿಗೆ ಕಳೆದ ಆರು ತಿಂಗಳಿಂದ ಖರ್ಚು ಮಾಡಿರುವ ಹಣವೆಷ್ಟು;

ಆ) ಸದರಿ ಅವಧಿಯಲ್ಲಿ ಸಾಧಿಸಿರುವ ಕಾಮಗಾರಿಯ ಪ್ರಗತಿ ಏನು (ವಿವರಗಳನ್ನು ನೀಡುವುದು)?

ಶ್ರೀ ಕೆ.ಎನ್. ನಾಗೇಗೌಡ ಬೃಹತ್ (ನೀರಾವರಿ ಸಚಿವರು) :—

ಅ) ರೂ.37.56 ಕೋಟಿಗಳು.

ಆ) ವೈ ಅಲೈನ್‌ಮೆಂಟ್ ಲೈನಿಂಗ್ ಕಾಮಗಾರಿಗಳು ಪ್ರಗತಿಯಲ್ಲಿ ಇದ್ದು 1 ಕಿ.ಮೀ ಲೈನಿಂಗ್ ಕೆಲಸವು ಮಾಡಲಾಗಿರುತ್ತದೆ.

ತುಮಕೂರು ಶಾಖಾ ನಾಲಾ ಪ್ರಾರಂಭದಿಂದ 125ನೇ ಕಿ.ಮೀ.ವರೆಗೆ ಲೈನಿಂಗ್ ಕಾಮಗಾರಿಗಳು ಕೈಗೊಳ್ಳಲಾಗಿರುತ್ತದೆ. 126 ರಿಂದ 187 ರವೆಗಿನ ಕಿಮೀ. ರೀಚ್‌ಗಳಲ್ಲಿ

ನಾಲಾ ಅಗೆತ ಮತ್ತು ಏರಿ ನಿರ್ಮಾಣ ಮತ್ತು ಅಡ್ಡ ಮೋರಿ ಕಾಮಗಾರಿಗಳು ವಿವಿದ ಹಂತದಲ್ಲಿ ಪ್ರಗತಿಯಾಗಿರುತ್ತವೆ.

ನಾಗಮಂಗಲ ಶಾಖಾ ನಾಲೆ ಕಿ.ಮೀ. 40 ರಿಂದ 62ರವರೆಗಿನ ನಾಲಾ ಅಗೆತ, ಏರಿ ನಿರ್ಮಾಣ ಹಾಗೂ ಅಡ್ಡಮೋರಿ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಮಾನ್ಯ ಅಧ್ಯಕ್ಷರೇ, ನೀರಾವರಿಗೆ ಆದ್ಯತೆ ಎನ್ನವುದು ಸರ್ಕಾರದ ಘೋಷಣೆ. ಆದರೆ ಮಾನ್ಯ ಸಚಿವರು ಕೊಟ್ಟರತಕ್ಕಂಥ ಉತ್ತರದಲ್ಲಿ ಕಳೆದ ಆರು ತಿಂಗಳಲ್ಲಿ ಕೇವಲ ಮುವತ್ತೆರಡೂವರೆ ಕೋಟಿ ರೂಪಾಯಿಗಳನ್ನು ಮಾತ್ರ ತುಮಕೂರು ಹೇಮಾವತಿ ನಾಲೆಗೆ ಖರ್ಚು ಮಾಡಿದ್ದೇವೆಂದು ಹೇಳಿದಾಗ ಬಹುಶ: ನಾವು ನೀರಾವರಿಗೆ ಆದ್ಯತೆ ಕೊಡುತ್ತೇವೆ ಎನ್ನುವ ಮಾತನ್ನು ತಾವು ಏನು ಹೇಳುತ್ತಿದ್ದಿರಿ ಅದರ ಬಗ್ಗೆ ನನಗೆ ಭ್ರಮನಿರಸನವಾಗುತ್ತಿದೆ. ತಾವು ಏನು ಹೇಳುತ್ತಿದ್ದೀರಿ 1999ರ ಮೇ ಅಥವಾ ಜೂನ್ ವೇಳೆಗೆ ನಾವು ಕುಣಿಗಲ್ ಕೆರೆಗೆ 187ನೇ ಕಿಲೋಮೀಟರ್ ಕಾಮಗಾರಿಗಳನ್ನು ಸಂಪೂರ್ಣ ಮಾಡಿ ನೀರು ಕೊಡುತ್ತೇವೆಂದು ಏನು ಹೇಳಿದ್ದೀರಿ ತಾವು ಈ ರೀತಿ ಮಂದಗತಿಯಲ್ಲಿ ಕಾಮಗಾರಿಗಳನ್ನು ಮಾಡುವುದಾದರೆ ಹೇಮಾವತಿ ಕಾಮಗಾರಿಗಳನ್ನು ತಾವು ಒಂದು ಟೈಮ್‌ಬೌಂಡ್ ಕಾರ್ಯಕ್ರಮ ಹಾಕಿಕೊಂಡು ಮಾಡದೇ ಹೋದರೆ ನೀವು ಕೊಟ್ಟರತಕ್ಕಂಥ ಮಾತಿನಂತೆ ನೀರು ಕೊಡುವುದಕ್ಕೆ ಆಗುತ್ತದೆಯೇ?

12.30 ಪಿ.ಎಂ.

ಇಷ್ಟು ಮಂದಗತಿಯಿಂದ ಈ ಕಾಮಗಾರಿಗಳನ್ನು ಮಾಡುವುದಾದರೆ ತಾವುಗಳು ಈ ಬಗ್ಗೆ ಮಲತಾಯಿ ಧೋರಣೆಯನ್ನು ತೋರಿಸಿದ ಹಾಗೆ ಆಗುತ್ತದೆ. ಇದು ಹೇಮಾವತಿ ನಾಲೆಯ ಕಾಮಗಾರಿ ಇರಬಹುದು ಅಥವಾ ಕಾವೇರಿ ಬೇಸಿನ್‌ನಲ್ಲಿ ಬರತಕ್ಕಂಥ ಯಾವುದೇ ಕಾಮಾಗಾರಿಗೂ ಕೂಡ ಸರಕಾರದವರು ಆದ್ಯತೆಯನ್ನು ಕೊಡುತ್ತಾ ಇಲ್ಲ ಎಂಬ ಮಾತನ್ನು ನಾವು ಇಲ್ಲಿ ಹೇಳಬೇಕಾಗುತ್ತದೆ. ಆದ್ದರಿಂದ ದಯಮಾಡಿ ತಾವುಗಳು ಕೃಷ್ಣ ಬೇಸಿನ್‌ಗೋಸ್ಕರವಾಗಿ ತಾವುಗಳು ಮಾಡುತ್ತಿದ್ದೀರಿ, ಆದೇ ಮಾದರಿಯಲ್ಲಿ ಕಾವೇರಿ ಜಲಭಾಗ್ಯ ನಿಗಮವನ್ನು ಮಾಡಿ ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಕಾಮಗಾರಿಗಳನ್ನು ಕಾಲಮಿತಿ ಯೋಜನೆಗಳೆಂದು ಪರಿಗಣಿಸಿ ಮುಗಿಸುವ ಯೋಜನೆಗಳೇನಾದರೂ ತಮ್ಮಲ್ಲಿ ಇದೆಯೇ? ಎಂಬ ಬಗ್ಗೆ ಮಾನ್ಯ ಸಚಿವರು ದಯಮಾಡಿ ಉತ್ತರ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :— ಮಾನ್ಯ ಅಧ್ಯಕ್ಷರೇ, ತಾವುಗಳು ಹೇಳಿದ ಪ್ರಕಾರ 1998-99 ರಲ್ಲಿ 90 ಕೋಟಿ ರೂಪಾಯಿಗಳನ್ನು ನಾವು ಬಜೆಟ್‌ನಲ್ಲಿ ಇಟ್ಟಿದ್ದೇವೆ. 62 ಕೋಟಿ ರೂ.ಗಳು ಇಲ್ಲಿಯವರೆಗೆ ಖರ್ಚಾಗಿದ್ದು 15 ಕೋಟಿ ರೂ.ಗಳು ಪೆಂಡಿಂಗ್ ಬಿಲ್ ಇದೆ. ತಾವುಗಳು ಆರು ತಿಂಗಳಲ್ಲಿ ಎಷ್ಟು ಮಾಡಿದ್ದೀರಿ ಎಂದು ಕೇಳಿದ್ದೀರಿ. ಅದಕ್ಕೆ ಉತ್ತರವಾಗಿ ಆರು ತಿಂಗಳುಗಳಲ್ಲಿ 37 ಕೋಟಿ ರೂ.ಗಳು ಎಂದು ಹೇಳಿದ್ದೇವೆ. ಆದರೆ ಜನವರಿ ತಿಂಗಳವರೆಗೆ ಒಟ್ಟು ಖರ್ಚಾಗಿರುವುದು 67 ಕೋಟಿ ರೂ.ಗಳು ಪೆಂಡಿಂಗ್ ಬಿಲ್ ಇರತಕ್ಕಂಥಾದ್ದು 15 ಕೋಟಿ. 90 ಕೋಟಿ ರೂಗಳು ಇಲ್ಲಿ ಬಜೆಟ್ ಪ್ರಾವಿಜನ್ ಇರತಕ್ಕಂಥಾದ್ದು. ನಾವು ಒಟ್ಟು 1584 ಕೋಟಿ ರೂ.ಗಳಲ್ಲಿ ಇದು ಪ್ರಾರಂಭವಾದ 1987ನೇ ಇಸವಿಯಿಂದ ತುಮಕೂರು ಹೇಮಾವತಿ ವಲಯಕ್ಕೆ 648 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ನಾವು 187ನೇ ಕಿ.ಮೀ. ತನಕ ಟೆಂಡರ್‌ನ್ನು ಕರೆದಿದ್ದೇವೆ. ವಿವಿಧ ಹಂತದಲ್ಲಿ ಟೆಂಡರ್ ಕರೆದಿರುವುದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಈ ವರ್ಷದ ಮಾರ್ಚ್ ಕೊನೆಯೊಳಗಾಗಿ 187 ನೇ ಕಿ.ಮೀ. ತನಕ ಮಾಡಿ ಮುಗಿಸುತ್ತೇವೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಮಾನ್ಯ ಅಧ್ಯಕ್ಷರೇ, ಈಗಾಗಲೇ ಕೃಷ್ಣ ಜಲಭಾಗ್ಯ ನಿಗಮ ಎಂದು ಆಗಿದೆ. ಅದರ ನಂತರ ಕರ್ನಾಟಕ ನೀರಾವರಿ ನಿಗಮದ ರಚನೆಯೂ ಕೂಡ ಆಗಿದೆ. ಇದು ಸಂತೋಷದ ವಿಚಾರವಾಗಿದೆ. ಇದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಕಾವೇರಿ ಬೇಸಿನ್‌ನಲ್ಲಿ ಬರತಕ್ಕಂಥ ಕಾಮಗಾರಿಗಳಿಗೆ ಬರತಕ್ಕಂಥ ವೆಚ್ಚವನ್ನು ಮೊಬಲೈಸ್ ಮಾಡಿಕೊಳ್ಳಲು ತಾವುಗಳು ಏನು ವ್ಯವಸ್ಥೆಯನ್ನು ಮಾಡಿದ್ದೀರಿ? ನೀವು ಬಜೆಟ್‌ನಲ್ಲಿ 1998-99ಕ್ಕೆ 325 ಕೋಟಿ ರೂ.ಗಳನ್ನು ಇಟ್ಟಿದ್ದೀರಿ. ಈ ವರ್ಷಕ್ಕೆ ತಮ್ಮ ಯೋಜನೆ ಏನಿದೆ? ಎಷ್ಟು ಹಣವನ್ನು ಇದಕ್ಕಾಗಿ ಇಟ್ಟಿದ್ದೀರಿ? ಹಾಗಾದರೆ ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಯೋಜನೆಗಳಿಗೆ ಕಾಲಮಿತಿಯನ್ನು ನಿರ್ದಿಷ್ಟಪಡಿಸಿ ಮುಗಿಸುವುದು ಬೇಡವೇ? ತಾವುಗಳು ಈ ವಲಯಕ್ಕೂ ಕೂಡ ನೀರಾವರಿ ವಿಚಾರದಲ್ಲಿ ಪ್ರಮುಖ ಆದ್ಯತೆಯನ್ನು ಕೊಡಬೇಕಾಗುತ್ತದೆ. ಇದು ಸರಕಾರದ ಕರ್ತವ್ಯ ಕೂಡ ಆಗಿದೆ.

ಅಧ್ಯಕ್ಷರು :— ಮುದ್ದಹನುಮೇಗೌಡರು ಕಳೆದ ಆರು ತಿಂಗಳುಗಳಲ್ಲಿ ಹೇಮಾವತಿಗೆ ಸಂಬಂಧಪಟ್ಟಂತೆ ಖರ್ಚು ಮಾಡಿದ ವಿಚಾರವನ್ನು ಕೇಳಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈಗ ಇಡೀ ಕಾವೇರಿ ಬೇಸಿನ್ ವಿಚಾರವನ್ನು ಕೇಳುತ್ತಿದ್ದೀರಿ. ನೀವು ಇನ್ನೊಂದು ನೋಟೀಸ್ ಕಳುಹಿಸಿ ಕೊಡಿ. ಅವರು ಮತ್ತೊಂದು ವಿವರವಾದ ಉತ್ತರವನ್ನು ಕೊಡುತ್ತಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಮಾನ್ಯ ಅಧ್ಯಕ್ಷರೇ, ಕಳೆದ ಆರು ತಿಂಗಳುಗಳಲ್ಲಿ ಖರ್ಚು ಮಾಡಿದ ಹಣವನ್ನು ನೋಡಿದಾಗ ಇವರು ಈ ಸ್ಪೀಡ್‌ನಲ್ಲಿ ಹೋದರೆ ಈ ಕಾಮಗಾರಿಗಳನ್ನು ಮುಗಿಸುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು :— ತಾವು ಕೇಳಿದ ಪ್ರಶ್ನೆಗೆ ಮಾತ್ರ ಉತ್ತರಿಸಲು ಸಚಿವರು ತಯಾರಾಗಿ ಬಂದಿರುತ್ತಾರೆ. ನೀವು ಇಷ್ಟು ವಿವರಗಳನ್ನು ಕೇಳಿದರೆ ಕೂಡಲೇ ಉತ್ತರಿಸಲು ಅವರಿಂದ ಆಗುವುದಿಲ್ಲ. ತಾವುಗಳು ಅದಕ್ಕಾಗಿ ಪ್ರತ್ಯೇಕವಾದ ಪ್ರಶ್ನೆಯನ್ನು ಕಳುಹಿಸಿಕೊಡಿ. ಸಚಿವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಮಾನ್ಯ ಅಧ್ಯಕ್ಷರೇ 1999 ಜೂನ್ ಮೇಳೆಗೆ ಕುಣಿಗಲ್ ಕೆರೆಗೆ 187ನೇ ಕಿ.ಮೀ.ವರೆಗಿನ ಕಾಮಗಾರಿಯನ್ನು ಮುಗಿಸಿ ನೀರು ಕೊಡುತ್ತೇವೆ ಎಂಬ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಹಾಗಾದರೆ ನೀವು ಹೇಳಿದಂತೆ ಸಂಪೂರ್ಣವಾಗಿ ಆ ಕಾಮಗಾರಿಯನ್ನು ಮಾಡಿ ಮುಗಿಸಲು ಸಾಧ್ಯವಾಗುತ್ತದೆಯೇ ಎಂಬ ಮಾತನ್ನು ಹೇಳಬೇಕು.

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಅಧ್ಯಕ್ಷರೇ, ಆದು ಸಾಧ್ಯವಾಗುವುದಿಲ್ಲ. ಕಾರಣ ಏನೆಂದರೆ, ಇನ್ನೂ 1058 ಕೋಟಿ ರೂ.ಗಳು ಇರತಕ್ಕಂಥ ಆನ್‌ಗೋಯಿಂಗ್ ಪ್ರಾಜೆಕ್ಟ್‌ಗಳಿಗೇ ಬೇಕು. ನಾವು 187ನೇ ಕಿ.ಮೀ.ವರೆಗೆ ಮೈನ್ ಕೆನಾಲ್‌ನ್ನು ಡಿಸೆಂಬರ್ ತಿಂಗಳ ಕೊನೆಯೊಳಗಾಗಿ ಮುಗಿಸಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೇ, ಇವರು ಹಣ ಇಲ್ಲ ಎಂದು ಕಾಮಗಾರಿಗಳನ್ನು ಸ್ಥಗಿತ ಮಾಡಿದ್ದಾರೆ. ಕೃಷ್ಣ ಜಲಭಾಗ್ಯ ನಿಗಮಕ್ಕೆ ಮಾಡಿದ ಹಾಗೆ ನಮ್ಮ ಏರಿಯಾದಲ್ಲೂ ಬಾಂಡ್ ರೈಸ್ ಮಾಡಬಹುದಾಗಿತ್ತು. ಹೀಗೆ ಬಾಂಡ್ ರೈಸ್ ಮಾಡಿ ಆ ಹಣದಲ್ಲಿ ಕಾಮಗಾರಿಗಳನ್ನು ಮಾಡಲು ನಿಮಗೆ ಯಾವ ತೊಂದರೆ ಇದೆ ಎಂಬ ಬಗ್ಗೆ ನಮಗೆ ಗೊತ್ತಿಲ್ಲ. ಮೊದಲು ಲೈನಿಂಗ್ ವರ್ಕ್ಸ್‌ನ್ನು ಮಾಡಿ ಮುಗಿಸುತ್ತೇವೆ, ಆ ಮೇಲೆ ಡಿಸ್ಟ್ರಿಬ್ಯೂಟರೀಸ್‌ನ್ನು ಮಾಡುತ್ತೇವೆ ಎಂದು ನಮ್ಮೊಂದಿಗಿನ ಒಂದು ಮೀಟಿಂಗ್‌ನಲ್ಲಿ ಮಾನ್ಯ ಸಚಿವರು ಹೇಳಿದ್ದರು. ಆದರೆ ವಾಸ್ತವವಾಗಿ ಹಾಗೆ ನಡೆಯಲಿಲ್ಲ. ಅಲ್ಲಿ ಕಂಟ್ರಾಕ್ಟರ್ಸ್‌ಗೆ ಸ್ಕೋಪ್ ಕೊಡಬೇಕೆಂದು ಡಿಸ್ಟ್ರಿಬ್ಯೂಟರೀಸ್‌ಗಳು ಜಾಸ್ತಿಯಾಗಿವೆಯೇ ಹೊರತು ಲೈನಿಂಗ್ಸ್ ಚೆನ್ನಾಗಿ ಆಗಲಿಲ್ಲ. ತಾವುಗಳು ಅಲ್ಲಿಗೆ ಬಂದು ಲೈನಿಂಗ್ ಎಷ್ಟು ಕಿ.ಮೀ.ಗಳ ವರೆಗೆ ಆಗಿದೆ ಎಂಬುದನ್ನು ನೋಡುತ್ತೀರಾ? ತಾವುಗಳು ಶಾಸಕರುಗಳೆಲ್ಲರನ್ನೂಕರೆದು ನಮ್ಮ ಎದುರಿಗೆ ಅಧಿಕಾರಿಗಳನ್ನು ಕೂರಿಸಿಕೊಂಡು ಇಲ್ಲಿಂದ ಇವ್ಹೊತ್ತಿನಿಂದ ನಾವು ಲೈನಿಂಗ್ ವರ್ಕ್ಸ್‌ನ್ನು ಮಾಡಬೇಕೆಂದು ಹೇಳಿದ ಹಾಗೆ ಮಾತಿಗೆ ಗೌರವವನ್ನು ಏನಾದರೂ ಉಳಿಸಿಕೊಂಡಿದ್ದೀರಾ ಎಂಬ ಬಗ್ಗೆ ಸದನಕ್ಕೆ ತಿಳಿಸಬೇಕು. ನೀವು ನಮ್ಮೆದುರು ಲೈನಿಂಗ್ ಮಾಡಿ ಎಂದು ಹೇಳಿದರೆ ನಿಮ್ಮ ಇಂಜಿನೀಯರ್ಸ್ ಅಲ್ಲಿ ಹೋಗಿ ಡಿಸ್ಟ್ರಿಬ್ಯೂಟರೀಸ್ ಮಾಡುತ್ತಾರೆ.

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಅಧ್ಯಕ್ಷರೆ, ಲೈನಿಂಗ್ 124 ನೇ ಕಿ.ಮೀ. ವರಗೆ ವಿವಿಧ ಹಂತದಲ್ಲಿ ಆಗಿದೆ. ಅದೇ ರೀತಿಯಲ್ಲಿ ಡಿಸ್ಟ್ರಿಬ್ಯೂಟರೀಸ್‌ನ್ನು ಮೇಜರ್

ಆಗಿ ತೆಗೆದುಕೊಂಡಿದ್ದಾರೆ. ಕೆರೆಗಳಿಗೆ ನೀರು ಕೊಡಬೇಕೆನ್ನುವ ದೃಷ್ಟಿಯಿಂದ ಡಿಸ್ಟ್ರಿಬ್ಯೂಟರಿ ಗಳನ್ನು ತೆಗೆದುಕೊಂಡಿದ್ದಾರೆ. 150 ಕೆರೆಗಳಿಗೆ ಅದನ್ನು ತೆಗೆದುಕೊಂಡಿದ್ದಾರೆ. ಅದೇ ರೀತಿಯಲ್ಲಿ ಲೈನಿಂಗ್‌ನ್ನೂ ಕೂಡ ವೇಗದಲ್ಲಿ ತೆಗೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತವೆ. ನೀರಾವರಿ ನಿಗಮವನ್ನು ಮಾಡಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಈ ಕುರಿತು ಡಿಸ್‌ಪ್ಯೂಟ್ ಇರುವುದರಿಂದ ಮತ್ತೆ ಕಾವೇರಿ ಪ್ರಾಧಿಕಾರ ಮುಂತಾಗಿ ಆಗಿರತಕ್ಕಂಥ ಹಿನ್ನಲೆಯಲ್ಲಿ, ಯಾವರೀತಿಯಲ್ಲಿ ನಾವು ಎರಡು ನಿಗಮಗಳನ್ನು ಮಾಡಿದ್ದೇವೆ. ಇನ್ನು ಮೂರನೆಯದನ್ನು ಹೇಗೆ ಮಾಡಬೇಕೆಂಬ ಬಗ್ಗೆ ಆಲೋಚನೆ ಮಾಡಬೇಕು. ಯಾಕೆಂದರೆ ಇನ್ನೂ ನಮಗೆ 2000 ಕೋಟಿ ರೂ.ಗಳು ಬೇಕು. ಆದ್ದರಿಂದ ಈ ಬಗ್ಗೆ ಆಲೋಚನೆ ಮಾಡುತ್ತೇವೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಮಾನ್ಯ ಅಧ್ಯಕ್ಷರೆ, ಜೂನ್ 1999ಕ್ಕೆ ಕುಣಿಗಲ್ ಕೆರೆಗೆ ನೀರು ಕೊಡುತ್ತೇವೆ ಎಂದು ಮಾನ್ಯ ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದು ಅನೇಕ ಸದನದಲ್ಲಿ ಕೂಡ ಹೇಳಿದ್ದರು. ಅದೇ ರೀತಿಯಲ್ಲಿ ತಾವುಗಳು ಕುಣಿಗಲ್‌ನ ಹೆಬ್ಬೂರಿಗೆ ಬಂದಾಗಲೂ ಕೂಡ ಆಶ್ವಾಸನೆಯ ಮಾತುಗಳನ್ನು ಹೇಳಿ ಈಗ ಅದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೀರಿ. ಸರಕಾರದ ಈ ಪ್ರವೃತ್ತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

ಅಧ್ಯಕ್ಷರು :— ಪ್ರಶ್ನೋತ್ತರ ವೇಳೆಯಲ್ಲಿ ಸಭಾತ್ಯಾಗ ಮಾಡುವುದು ಹೊಸ ಪದ್ಧತಿ. ಪ್ರಶ್ನೋತ್ತರ ವೇಳೆಯಲ್ಲಿ ಸಭಾತ್ಯಾ ಮಾಡತಕ್ಕಂಥ ಪದ್ಧತಿಯು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಎಲ್ಲಿಯೂ ಇಲ್ಲ. ಆ ದಿಸೆಯಲ್ಲಿ ಇವೊತ್ತು ನಾವು ಹೊಸದಾಗಿ ನಾಂದಿ ಹಾಕಿದ್ದೇವೆ. ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಾರಂಭ ಮಾಡಿದ್ದಾರೆ. ಅದು ನಡೆದುಕೊಂಡು ಹೋಗುತ್ತದೆ. ಎಲ್ಲಿಯೂ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಸಭಾತ್ಯಾಗ ಮಾಡುವ ಪದ್ಧತಿಯು ಇಲ್ಲ. ನಮ್ಮಲ್ಲಿಯೇ ಇದು ಮೊದಲು.

ಶ್ರೀ ಎಸ್.ಪಿ. ಹನುಮೇಗೌಡ :— ಮಾನ್ಯ ಅಧ್ಯಕ್ಷರೇ, ತಾವುಗಳು ತಮ್ಮ ಅಭಿಪ್ರಾಯವನ್ನು ಹೇಳಿದ್ದೀರಿ. ಅದನ್ನು ಗೌರವಿಸಿ ನಾನು ಸಭಾತ್ಯಾಗ ಮಾಡುವುದನ್ನು ಹಿಂತೆಗೆದುಕೊಂಡಿದ್ದೇನೆ.

ವಿಷಯ :— ಅಗ್ನಿಶಾಮಕ ಸೇವೆ ಇಲಾಖೆಯಲ್ಲಿ ಅನುಕಂಪದ ನೇಮಕಾತಿಗಳು.

20(46) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಬಂದೀಖಾನೆ ಮತ್ತು ಗೃಹರಕ್ಷಕದಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಅಗ್ನಿಶಾಮಕ ಸೇವೆಗಳ ಇಲಾಖೆಯಲ್ಲಿ 1998ರ ಡಿಸೆಂಬರ್ ಅಂತ್ಯವರೆಗೆ ಅನುಕಂಪದ ನೇಮಕಾತಿ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು?